ಗಿರೀಶ ಕಾಸರವಳ್ಳಿ ನಿರ್ದೇಶನದ 'ಗೃಹಭಂಗ', ಶಂಕರ ನಾಗ್ ನಿರ್ದೇಶನದ 'ಮಾಲ್ಗುಡಿ ಡೇಸ್', ಜಯಂತ ಕಾಯ್ಕಿಣಿಯವರ 'ರಸಋಷಿಗೆ ನಮಸ್ಕಾರ' ಮುಂತಾದ ಸರಣಿಗಳು, ಗಿರೀಶ ಕಾರ್ನಾಡರ ನಿರೂಪಣೆಯ 'ಟರ್ನಿಂಗ್ ಪಾಯಿಂಟ್', ಪ್ರಕೃತಿ ಎನ್. ಬನವಾಸಿಯವರ ಇಂಗ್ಲಿಷ್ ಬೋಧನಾ ಸರಣಿಗಳು, ಈಟೀವಿಯ 'ಅನ್ನದಾತ'... ಮುಂತಾದವು ಉಂಟು ಮಾಡಿದ ಪ್ರಭಾವ ಪ್ರೇರಣೆಗಳಂತೂ ಒಂದೆರಡಲ್ಲ. ಬಿ. ಸುರೇಶ್ ಮತ್ತು ಯೋಗರಾಜ್ ಭಟ್ ನಿರ್ದೇಶಿಸಿದ 'ಸಾಧನೆ' ಧಾರಾವಾಹಿಯಿಂದ ನನ್ನ ಬದುಕಿನ ದಿಕ್ಕೇ ಬದಲಾಯಿತು ಎಂದು ಮಿತ್ರರೊಬ್ಬರು ಹೇಳಿದ್ದನ್ನು ನಾನ್ಯಾವತ್ತೂ ಮರೆಯಲಾರೆ.

ಮಹಿಳಾ ವಿಮೋಚನೆಯ ಕಥೆ ಹೇಳಿದ 'ಉಡಾನ್', ಕುಟುಂಬ ಯೋಜನೆಯ ಮಹತ್ವ ತಿಳಿಸಿದ 'ಹಂ ಲೋಗ್', ಸ್ತ್ರೀ ಸ್ಥೈರ್ಯದ ಪರ ನಿಂತ 'ತಾರಾ' ಧಾರಾವಾಹಿಗಳು ಬಂದಾಗ ಹೆಂಗಸರನ್ನು ತನ್ನತ್ತ ಸೆಳೆಯಬೇಕಿತ್ತು ಟೀವಿಗೆ. ಹಾಗೆ ಅವು ಸಾವಿರಾರು ಜನರ ಜೀವನದ ದಿಕ್ಕನ್ನೂ ಬದಲಿಸಿದವು. ಆದರೆ ಈಗ ಇತ್ತ ಬಂದಿರುವ ಹೆಂಗಸರನ್ನು ಮತ್ತೆತ್ತಲೂ ಹೋಗದಂತೆ ಉಳಿಸಿಕೊಳ್ಳಬೇಕಾದ ಸವಾಲು ಟೀವಿಯ ಮುಂದಿದೆ. ಹಾಗಾಗಿ ಯಾವ ಧಾರಾವಾಹಿ ತೆಗೆದುಕೊಂಡರೂ ಅಲ್ಲಿ ಕೇಂದ್ರಪಾತ್ರವೂ ಹೆಣ್ಣು, ವಿಲನ್‌ಗಳೂ ಹೆಣ್ಣೇ. ಸಾಕ್ಷರರ ಪ್ರಮಾಣ ಹೆಚ್ಚಾಗಿರುವ ಈ ಕಾಲದಲ್ಲೇ ಅವರಿಗಿಷ್ಟವೆಂಬ ಕಾರಣಕ್ಕೆ ಈ ಜನ್ಮಾಂತರದ ಕಥೆಗಳು, ನಾಗಿಣಿಯ ಕಥೆಗಳು! ಕುಟುಂಬ ವಿಘಟನೆಗೆ ಕನ್ನಡಿ ಹಿಡಿಯುವ, ಅತ್ತೆಯನ್ನು ಹಣಿಯುವ, ನಾದಿನಿಯನ್ನು ಮಣಿಸುವ ಬಾಯಿಜೋರಿನ ಪಾತ್ರಗಳು! ಬಹುಶಃ ಇದು ಸಾಮಾಜಿಕ ಮೌಲ್ಯಗಳ ಪಲ್ಲಟಕ್ಕೆ ಹಿಡಿದಿರುವ ಕನ್ನಡಿಯೂ ಆಗಿರಬಹುದೆ?

ಯಾವಾಗ ಮನರಂಜನೆ ಮುಖ್ಯ ಭೂಮಿಕೆಗೆ ಬಂತೋ, ಅದರ ಭಾಗವಾಗಿ ಕ್ರೈಮೂ ನಮ್ಮ ಮನೆಯನ್ನು ಪ್ರವೇಶಿಸಿತು. ಕ್ರೈಂ ಡೈರಿ, ಕ್ರೈಂ ಸ್ಟೋರಿಗಳಂಥ ಕಾರ್ಯಕ್ರಮಗಳಿಂದಾಗಿ ದಿನಾ ರಾತ್ರಿ ಎರಡು ಹೆಣಗಳು ಬೀಳುವುದನ್ನು ನೋಡಿದ ಮೇಲೆಯೇ ನಮಗೆ ನೆಮ್ಮದಿಯ ನಿದ್ದೆ ಬರತೊಡಗಿತು. 'ಟೀವಿಯಲ್ಲಿ ಕೊಲೆಗಳನ್ನು ನೋಡುವುದರಿಂದ ನಿಮ್ಮೊಳಗಿನ ವೈರತ್ವದ ಭಾವ ಕಡಿಮೆಯಾಗುತ್ತದೆ' ಎಂದು ಅಲ್‌ಫ್ರೆಡ್ ಹಿಚ್‌ಕಾಕ್ ಹೇಳಿದ. ಈ ಮಾತು ಬಹುಮಟ್ಟಿಗೆ ಅರಿಸ್ಟಾಟಲ್‌ನ ಕೆಥಾರ್ಸಿಸ್ ಥಿಯರಿಯನ್ನೇ ಹೋಲುತ್ತಿತ್ತು. ಆದರೆ ಇದೇ ಮಾತನ್ನು ಮುಂದುವರೆಸಿ, ''ಕಡಿಮೆಯಾಗಲು ನಿಮ್ಮಲ್ಲಿ ವೈರತ್ವವೇ ಇಲ್ಲ ಎಂದಿಟ್ಟುಕೊಂಡರೂ ನೀವೇನೂ ಚಿಂತಿಸಬೇಕಿಲ್ಲ, ಅದನ್ನು ತುಂಬಲಿಕ್ಕೆಂದೇ ಟೀವಿಯೂ ಜಾಹೀರಾತುಗಳೂ ಇರುವುದು'' ಅಂದಾಗ ಮಾತ್ರ ಆ ಮಾತಿನ ಗಹನತೆಯ ಅರಿವಾಗಿ ಮಾಧ್ಯಮತಜ್ಞರು ಬೆಚ್ಚಿಬೀಳುವಂತಾಯಿತು.

ಟೀವಿ ನಮ್ಮ ಅಮ್ಮನ ಮೇಲೆ ಮಾಡಿರುವ ಪ್ರಭಾವವೂ ಅಷ್ಟಿಷ್ಟಲ್ಲ. "ಎಲ್ಲ ಬುಟ್ಟೇನವ. ಅವೊಂದು ಮೂರು ದಾರಾವಾಹಿ ಹಿಡದೀನಿ. ಅವು ಮುಗದರೆ ಸಾಕು. ಮುಂದ ನೋಡಮು ದೇವರಾನ". ಎಲ್ಲ ಬುಟ್ಟೇನಿ ಅಂತಾಳ, ಮೂರು ಧಾರಾವಾಹಿ ಹಿಡದೀನಿ ಅಂತಲೂ ಅಂತಾಳ. ಆಮೇಲೆ ಯಾವುದೋ ವ್ರತ ಹಿಡದೀನಿ, ದೇವರ ಪೂಜಾ ಹಿಡದೀನಿ ಅನ್ನೋ ಧಾಟಿಯಲ್ಲೇ ಧಾರಾವಾಹಿ ಹಿಡದೀನಿ ಅನ್ನೋದು ಕೇಳಿ ನಾನು ಮೊದಮೊದಲು ಬೆರಗಾಗಿದ್ದೆ. ಮೊನ್ನೆ ಸಲ ಬಂದಾಗ ಒಂದು ವಾರ ಇರೋಕೆ ಒದ್ದಾಡಿ ಹೋದ ಆಕೆ ಏಕಾಏಕಿ ಊರಿಗೆ ಹೊರಟುನಿಂತಳು. ಕೇಳಿದ್ದಕ್ಕೆ, "ಉಗಾದಿ ಅಮಾಸಿಗೆ ಮನ್ಯಾಗ ಕಾಯಿ ಒಡ್ಯದರ‍್ತಾದ. ನಾನು ಓಗೇಬೇಕು" ಅಂದಳು. "ಅದೇನು ಒಡಿಯದೈತೆ ಇಲ್ಲೇ ಒಡದ್ರೆ ಆಯ್ತಲ್ಲಮ್ಮ, ಇಲ್ಲೇ ಇರು ಯಾಕ ಹೋಗ್ತಿ ಸುಮ್ನೆ" ಅಂದೆ. ನಿಧಾನವಾಗಿ ಮನಸಿನೊಳಗಿನ ಮಾತು ಹೊರಗೆ ಹಾಕಿದಳು, "ನಿಮ್ಮಲ್ಲಿ ಟೀವಿ ಇರಲಾರದ್ದಕ್ಕ ಹೊತ್ತೇ ಹೋಗವಲ್ದಪ ನನಗ. ಇಲ್ಲಿಗೆ ವಾರಾಯ್ತು ಗೌರಿ ಸುದ್ದಿ ಏನಾಯ್ತಂತನೇ ಗೊತ್ತಾಗವಲ್ದು" ಅಂದಳು. "ಯಾವ ಗೌರಿ ಅಮ್ಮ?" ಅಂದೆ. "ಏಯ್ ಅದೇ ನಮ್ಮ ಪುಟಗೌರಿ" ಅಂದಳು!